# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 770(808) |
| **ಮಾನ್ಯ ಸದಸ್ಯರ ಹೆಸರು** | : | ಡಾ. ಬಿ.ಜಿ. ಪಾಟೀಲ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| **ಉತ್ತರಿಸುವ ಸಚಿವರು** | : | ಉನ್ನತ ಶಿಕ್ಷಣ ಸಚಿವರು |
| **ಉತ್ತರಿಸಬೇಕಾದ ದಿನಾಂಕ** | : | 16.12.2024 |

| | ಪ್ರಶ್ನೆ | ಉತ್ತರ |
|---|---|---|
| (ಅ) | ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಲಬುರಗಿಯ ವೀರಮ್ಮ ಗಂಗಸಿರಿ ಮಹಿಳಾ ಪದವಿ ಮಹಾ ವಿದ್ಯಾಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಯುನಿಫೈಡ್ ಯುನಿವರ್ಸಿಟಿ ಕಾಲೇಜ್ ಮ್ಯಾನೇಜ್ ಮೆಂಟ್ ಸಿಸ್ಟಂ (ಯು ಯು ಸಿ ಎಂ ಎಸ್) ತಂತ್ರಾಂಶದ ಅಂಕ ಪಟ್ಟಿಯಲ್ಲಿ ಹೆಸರುಗಳು ಅದಲು ಬದಲಾಗಿರುದರಿಂದ ನೈಜ ವಿದ್ಯಾರ್ಥಿಗಳು ಹಾಗೂ ಪಾಲಕರು ಗೊಂದಲಕ್ಕೀಡಾಗಿದ್ದು, ತಪ್ಪುಗಳ ತಿದ್ದುಪಡಿಗೆ ಕೈಗೊಂಡಿರುವ ಕ್ರಮಗಳೇನು; ವಿದ್ಯಾರ್ಥಿಗಳ ಹೆಸರುಗಳು ಅದಲು ಬದಲಾಗಲು ಕಾರಣಗಳೇನು; (ವಿವರ ನೀಡುವುದು) | ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ವೀರಯ್ಯ ಗಂಗಸಿರಿ ಮಹಿಳಾ ಪದವಿ ಮಹಾವಿದ್ಯಾಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಯು.ಯು.ಸಿ.ಎಂ.ಎಸ್. ತಂತ್ರಾಂಶದ ರೀ-ವ್ಯಾಲಿಡೇಟ್ ಆಧಾರ್ ಪ್ರಕ್ರಿಯೆಯಲ್ಲಿ ತಪ್ಪು ಆಧಾರ್ ಸಂಖ್ಯೆ ನಮೂದಿಸಿದ ಕಾರಣ ಸದರಿ ವಿದ್ಯಾರ್ಥಿಗಳ ಹೆಸರು ಬದಲಾಗಿದ್ದು ವಿಶ್ವವಿದ್ಯಾನಿಲಯದ ತಂತ್ರಾಂಶ ವಿಭಾಗವು ತಪ್ಪುಗಳ ತಿದ್ದುಪಡಿಗೆ ಕ್ರಮ ಕೈಗೊಂಡಿರುತ್ತದೆ. |
| (ಆ) | ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಕಡಿಮೆ ಅಂಕ ಬಂದು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿ ತಿಂಗಳುಗಳು ಕಳೆದರೂ ಫಲಿತಾಂಶ ಪ್ರಕಟಣೆಗೆ ತಡೆ ಮಾಡಲಾಗುತ್ತಿದ್ದು, ಇದರಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿದ್ದು, ಸಮಿತಿಯ ಮರುಮೌಲ್ಯ ಮಾಪನದ ಫಲಿತಾಂಶಗಳು ಶೀಘ್ರ ಪ್ರಕಟಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ? (ವಿವರ ನೀಡುವುದು) | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಆಯಾ ಸಾಲಿನ ಮರುಮೌಲ್ಯಮಾಪನದ ಫಲಿತಾಂಶಗಳನ್ನು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪರೀಕ್ಷಾ ನಿಯಮಾವಳಿಯ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ. ಮುಂದುವರೆದು ವಿಶ್ವವಿದ್ಯಾಲಯದಲ್ಲಿ ಆಯಾ ಸಾಲಿನ ಮರುಮೌಲ್ಯಮಾಪನದ ಫಲಿತಾಂಶಗಳನ್ನು ಕಾಲ ಕಾಲಕ್ಕೆ ಪ್ರಕಟಿಸಲಾಗುತ್ತಿದೆ. |

ಇಡಿ/42/ಎಂ.ವಿ.ವಿ/2024

(ಡಾ|| ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು.